ಫಲಿಸಿದ್ದಕ್ಕೆ ಸಂತೋಷಪಟ್ಟಿರಲೂಬೇಕು ಅಂತ. ಇದು ಸಾಲಿಗ–ಸಾಲಗಾರನ ನಡುವಿನ ಸಂಬಂಧದ ಒಂದು ವರಸೆ ಮಾತ್ರ.

ಇನ್ನೊಬ್ಬ ನನ್ನ ಗೆಳೆಯನಿದ್ದ. ಕಿಲಾಡಿ. ಅವನು ತನಗೆ ಯಾವುದಾದರೂ ಹಣ ಪಾವತಿಯ ಚೆಕ್ಕು ಬಂದರೆ, ಅದನ್ನೇ ಮೂಲ ಬಂಡವಾಳವನ್ನಾಗಿ ಮಾಡಿಕೊಂಡು, ಆ ಚೆಕ್ಕಿನ ಮೊತ್ತದ ನಾಲ್ಕೈದು ಪಟ್ಟು ಹಣವನ್ನು ಸ್ನೇಹಿತರಿಂದ, ಪರಿಚಯದವರಿಂದ ವಸೂಲಿ ಮಾಡಿಬಿಡುತ್ತಿದ್ದ. ಅದಕ್ಕಾಗಿ ಅವನು ಹೂಡುತ್ತಿದ್ದ ಉಪಾಯವೆಂದರೆ, 'ನೋಡಿ, ನನಗೆ ಐದು ಸಾವಿರ ರೂಪಾಯಿ ಚೆಕ್ಕು ಬಂದಿದೆ, ಕ್ಯಾಶ್ ಆಗೋಕ್ಕೆ ಇನ್ನು ಹತ್ತು ದಿನವಾದರೂ ಬೇಕು. ನನಗೆ ತುಂಬ ಅರ್ಜೆಂಟ್ ಹಣ ಬೇಕಿದೆ. ಆದ್ದರಿಂದ ದಯವಿಟ್ಟು ಎರಡು ಸಾವಿರ ರೂಪಾಯಿ ಕೊಡಿ. ಚೆಕ್ಕು ಕ್ಯಾಶ್ ಆಗ್ತಿದ್ದ ಹಾಗೆ ವಾಪಸ್ಸು ಮಾಡ್ತೀನಿ' ಅಂತ ಚೆಕ್ ಅನ್ನು ಅವರ ಮುಂದೆ ಪ್ರದರ್ಶಿಸುತ್ತಿದ್ದ. ಚೆಕ್ ನೋಡಿ ಪ್ರಸನ್ನರಾಗುತ್ತಿದ್ದವರು ತಮಗೆ ಹಣ ಬರುವುದು ಗ್ಯಾರಂಟಿಯೇ, ಏನೊ ಅರ್ಜೆಂಟಿಗೆ ಹಣ ಕೇಳ್ತಿದ್ದಾರೆ ಅಂದುಕೊಂಡು ಅಷ್ಟು ಹಣವನ್ನು ನಗದು ರೂಪದಲ್ಲಿ ಕೊಟ್ಟುಬಿಡುತ್ತಿದ್ದರು. ಆ ಗೆಳೆಯನು ಇನ್ನೂ ಹಲವಾರು ಜನರ ಹತ್ತಿರ ಹೀಗೆಯೇ ಹೇಳಿ ಹಣವನ್ನು ಅದೊಂದು ಬಗೆಯ ಸಾಲದ ರೀತಿಯಲ್ಲಿ ಸಂಗ್ರಹಿಸುತ್ತಿದ್ದ. ಆಮೇಲೆ ಅವರಿಗೆಲ್ಲ ಹಣವನ್ನು ಹಿಂದಿರುಗಿಸಿದನೋ ಹೇಗೆ ಅಂತ ಮಾತ್ರ ಕೇಳಬೇಡಿ. ಇದನ್ನೆಲ್ಲ ನೋಡಿದರೆ 'ಕೊಟ್ಟವನು ಕೋಡಂಗಿ...' ಎಂಬ ನಾಣ್ಣುಡಿ ಇನ್ನೊಮ್ಮೆ ನೆನಪಾಗುತ್ತದೆಯಲ್ಲವೆ?

ನನ್ನ ತಿಳಿವಳಿಕೆಗೆ ಬಂದ ಇನ್ನೊಂದು ಸಾಲದ ಪ್ರಸಂಗವನ್ನು ಇಲ್ಲಿಯೇ ತಿಳಿಸಿಬಿಡುತ್ತೇನೆ. ನಮ್ಮ ಮೈಸೂರು ಪ್ರದೇಶದಲ್ಲಿ ಒಂದು ಹಳ್ಳಿ. ಈಗಲೂ ಇದೆ. ಈಗ್ಗೆ ಅರವತ್ತು ವರ್ಷಗಳ ಹಿಂದೆ ಆ ಹಳ್ಳಿ ಎಲ್ಲ ಬಗೆಯ ನಾಗರಿಕ ಸೌಲಭ್ಯಗಳಿಂದ ವಂಚಿತವಾಗಿತ್ತು. ಊರಿನಲ್ಲಿ ಒಂದು ಬೀಡಿ ಬೆಂಕಿಪೊಟ್ಟಣದ ಅಂಗಡಿಯೂ ಇರಲಿಲ್ಲ. ಆ ಹೊತ್ತಿನಲ್ಲಿ ಆ ಊರಿಗೆ ಪರ ಊರಿನಿಂದ ಬಂದ ಒಬ್ಬ ವ್ಯಕ್ತಿ ಐನೂರು ರೂಪಾಯಿ ಬಂಡವಾಳದ ಮೇಲೆ ಒಂದು ಚಿಲ್ಲರೆ ಅಂಗಡಿಯನ್ನು ಇಟ್ಟ. ಊರಿನವರು ತಮ್ಮೂರಿಗೊಂದು ಅಂಗಡಿ ಬಂದುದಕ್ಕೆ ಸಂತೋಷಪಟ್ಟರು. ವ್ಯಾಪಾರ ಕ್ರಮೇಣ ಕುದುರತೊಡಗಿತು. ಪರಿಣಾಮ, ಐದು ವರ್ಷಗಳ ಅಂತರದಲ್ಲಿ ಅದೊಂದು ದೊಡ್ಡ ಅಂಗಡಿಯಾಗಿ

